# ಡಾ. ಬಿ.ಆರ್ ಎಡಿಸಿಎಲ್ ನೌಕರರ ಸಂಘ (ರಿ)

ಸಂಖ್ಯೆ:ಬ್ರಾಡ್ನಿಸಂ:2022-23/03 ದಿನಾಂಕ:13.12.2022

ಇವರಿಗೆ,

**ಮಾನ್ಯ ಅಧ್ಯಕ್ಷರು,**

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ,

ಕೇಂದ್ರ ಕಛೇರಿ, ಬೆಂಗಳೂರು-560001.

**ಮಾನ್ಯರೇ,**

**ವಿಷಯ**: ನಿಗಮದ ಅಧಿಕಾರಿಗಳು, ನೌಕರರು, ಮತ್ತು ಅವಲಂಬಿತ ಕುಟುಂಬದವರಿಗೆ ವೈದ್ಯಕೀಯ ವಿಮೆ ಒದಗಿಸುವಂತೆ ಕೋರಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರುಗಳಿಗೆ, ಸರ್ಕಾರಿ ನೌಕರರಿಗೆ ಒದಗಿಸಿರುವ ವೈದ್ಯಕೀಯ ಸವಲತ್ತುಗಳು ಇದುವರೆವಿಗೂ ದೊರೆತಿರುವುದಿಲ್ಲ. ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಿತ್ಯವೂ ಸಾರ್ವಜನಿಕರೊಂದಿಗೆ ವ್ಯವಹರಿಸುವ ಅಧಿಕಾರಿಗಳು ಮತ್ತು ನೌಕರರು ಹಲವಾರು ಸಂದರ್ಭಗಳಲ್ಲಿ ವೈದ್ಯಕೀಯ ತೊಂದರೆಗಳಿಗೆ ಈಡಾಗುವುದು ಸರ್ವೆ ಸಾಧಾರಣವಾಗಿದೆ. ಹಲವು ಸಂದರ್ಭಗಳಲ್ಲಿ ತಮ್ಮ ಮತ್ತು ಕುಟುಂಬದವರ ವೈದ್ಯಕೀಯ ವೆಚ್ಚಗಳನ್ನು ಭರಿಸಲು ತೊಂದರೆ ಪಡುವಂತಹ ಪರಿಸ್ಥಿತಿಯಲ್ಲಿ ನರಳುತ್ತಿರುವುದು ಕಂಡುಬಂದಿರುತ್ತದೆ.

ಆದುದರಿಂದ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ಅಧಿಕಾರಿ, ನೌಕರರು ಮತ್ತು ಅವರ ಅವಲಂಬಿತ ಕುಟುಂಬದವರಿಗೆ ವೈದ್ಯಕೀಯ ತುರ್ತು ಸನ್ನಿವೇಶಗಳನ್ನು ನಿಭಾಯಿಸಲು ನಿಗಮದ ವತಿಯಿಂದ ರೂ.10 ಲಕ್ಷಗಳ ನಗದು ರಹಿತ ವೈದ್ಯಕೀಯ ವಿಮೆಯನ್ನು ಒದಗಿಸುವಂತೆ ಡಾ. ಬಿ.ಆರ್ ಎಡಿಸಿಎಲ್ ನೌಕರರ ಸಂಘದ ವತಿಯಿಂದ ಈ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತಿದ್ದೇವೆ.

ಗೌರವಪೂರ್ವಕ ವಂದನೆಗಳೊಂದಿಗೆ,

**ಡಾ. ಬಿ.ಆರ್ ಎಡಿಸಿಎಲ್ ನೌಕರರ ಸಂಘದ ಪರವಾಗಿ**

ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು,

ಪ್ರತಿಯನ್ನು:

1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂ.ಅ.ನಿ, ಕೇಂದ್ರ ಕಛೇರಿ, ಬೆಂಗಳೂರು
2. ಪ್ರಧಾನ ವ್ಯವಸ್ಥಾಪಕರು (ಸಿ & ಆ) ಡಾ:ಬಿ.ಆರ್.ಅಂ.ಅ.ನಿ, ಕೇಂದ್ರ ಕಛೇರಿ, ಬೆಂಗಳೂರು
3. ಕಛೇರಿ ಪ್ರತಿ.

#26, 3ನೇ ಮಹಡಿ, 3ನೇ ಅಡ್ಡರಸ್ತೆ, ಹೊಯ್ಸಳನಗರ, ಮಾಗಡಿ ಮುಖ್ಯ ರಸ್ತೆ
ಸುಂಕದಕಟ್ಟೆ, ಬೆಂಗಳೂರು-560091.